ತಿಮ್ಮ: ಅಪ್ಪಾ, ನಮ್ಮ ಹಿತ್ತಲದಲ್ಲಿ ಒಂದು ಹಸು ನುಗ್ಗಿ ಬಂದಿದೆ.

ಗುಂಡಾ: ಅದನ್ನ ನನ್ನ ಎದುರಿಗೆ ಹೇಳಲು ಯಾಕೆ ಬಂದೆಯೋ. ಹಾಲನ್ನ ಕರೆದುಕೊಂಡು ಹೊರಗೆ ಓಡಿಸು.

***

ಗುಂಡ: ನಿಮ್ಮ ಕವನ ಎಂದರೆ ನನಗೆ ತುಂಬಾ ಇಷ್ಟ ಸರ್.

ಸಾಹಿತಿ: ಹೌದಾ ತುಂಬಾ ಸಂತೋಷ, ನನ್ನವು ಅನೇಕ ಕವನಗಳಿವೆ. ಅವುಗಳಲ್ಲಿ ಯಾವ ಕವನ ನಿನಗೆ ಇಷ್ಟ.

ಗುಂಡ: ಅದೇ ಸರ್, ನಿಮ್ಮ ಎರಡನೇ ಮಗಳು ಇದ್ದಾಳಲ್ಲ ಕವನ.

***

ತಿಮ್ಮ: 1996ರಲ್ಲಿ ಕ್ರಿಕೆಟ್ ವಿಶ್ವಕಪ್ ಯಾರಿಗೆ ಸಿಕ್ಕಿತು?

ಗುಂಡ: ಗೆದ್ದವರಿಗೆ

ತಿಮ್ಮ: ಕ್ರಿಕೆಟ್ ಬಗ್ಗೆ ಅತೀ ಚಿಕ್ಕದಾದ ಒಂದು ಪ್ರಬಂಧ ಬರೆಯಿರಿ.

ಗುಂಡ: ಮಳೆ ಬಂದ ಕಾರಣ ಪಂದ್ಯವನ್ನು ರದ್ದುಗೊಳಿಸಲಾಯಿತು.

ಟೀಚರ್: ತಾಜ್‌ಮಹಲನ್ನು ಯಾಕೆ ಜಗತ್ತಿನ ಅದ್ಭುತಗಳಲ್ಲಿ ಒಂದು ಎಂದು ಪರಿಗಣಿಸಲಾಗುತ್ತದೆ?

ಗುಂಡ: ಏಕೆಂದರೆ ಶಹಜಹಾನ್ ಇಷ್ಟೊಂದು ದೊಡ್ಡ ತಾಜ್‌ಮಹಲನ್ನು ಯಾವುದೇ ಬ್ಯಾಂಕ್‌ನಲ್ಲಿ ಸಾಲ ಮಾಡದೇ ಕಟ್ಟಿಸಿದ ಅದಕ್ಕಾಗಿ.

***

ತಿಮ್ಮ: ಮಹಾತ್ಮ ಗಾಂಧೀಜಿಯವರು ಸಾಯದೇ ಇದ್ದಿದ್ದರೆ?

ಗುಂಡ: ಈಗಲೂ ಬದುಕಿರುತ್ತಿದ್ದರು.

***

ಗುಂಡ: ಅವಳು ಹೆಜ್ಜೆ ಇಟ್ಟ ಕಡೆ ನಾನು ಮುತ್ತು ಕೊಡುತ್ತಾ ಇದ್ದೆ. ಆದರೆ ಹುಚ್ಚು ಹುಡುಗಿ ನನ್ನ ಪ್ರೀತಿನ ಅರ್ಥ ಮಾಡಿಕೊಳ್ಳಲೇ ಇಲ್ಲ. ಅದನ್ನು ತಪ್ಪಾಗಿ ತಿಳಿದುಕೊಂಡು ಬಿಟ್ಟಳು.

***

ತಿಮ್ಮ: ಏನಂತ ತಿಳಿದುಕೊಂಡಳು?

ಗುಂಡ: ನನ್ನ ಅಮ್ಮನ ಹತ್ತಿರ ಬಂದು ಆ್ಯಂಟಿ ನಿಮ್ಮ ಮಗ ಮಣ್ಣು ತಿನ್ನುತ್ತಾ ಇರುತ್ತಾನೆ ಅಂತ ಹೇಳಿದಳು.

***

ತಿಮ್ಮ: ಕ್ಲೋರೈಡನ್ನು ಕಾಯಿಸಿದಾಗ ಏನಾಗುತ್ತದೆ?

ಗುಂಡ: ಕಾಯುತ್ತದೆ.

***

ತಿಮ್ಮ: ಡಾಕ್ಟ್ರೇ, ನಾನು ದೇವಸ್ಥಾನವೊಂದರಲ್ಲಿ ಪೂಜಾರಿ. ಈಗ ಎರಡು ದಿನದಿಂದ ನನಗೆ ಲೂಸ್ ಮೋಷನ್ ಆಗಿದೆ. ಏನಾದರೂ ಔಷಧಿ ಕೊಡಿ.

ಗುಂಡ: ಈ ಔಷಧಿ ತಗೊ ಎಲ್ಲಾ ಸರಿ ಹೋಗುತ್ತೆ.

ತಿಮ್ಮ: ಏನಾದರೂ ಎಚ್ಚರಿಕೆ ತಗೋಬೇಕಾ?

ಗುಂಡ: ಏನೇ ಮಾಡು, ಆದರೆ ಶಂಖವನ್ನು ಮಾತ್ರ ಜೋರಾಗಿ ಊದಬೇಡ.

–ಭೋಜರಾಜ ಸೊಪ್ಪಿಮಠ



ಗಣೇಶ್ ಆರಳಿಕಟ್ಟೆ

ತಿಮ್ಮ: ಕಾಯಿಸಿದಾಗ ಘನ ವಸ್ತುವಾಗಿ ಪರಿವರ್ತನೆ ಹೊಂದುವ ದ್ರವ ಯಾವುದು?

ಗುಂಡಾ: ಇಡ್ಲಿ ಮತ್ತು ದೋಸೆ ಹಿಟ್ಟು

ಅಮ್ಮಾ, ಬಾಗಿಲ ಮುಂದೆ ಯಾರೋ ಕೂಗಿಕೊಳ್ಳುತ್ತಾ ಇದ್ದಾನೆ ಒಂದು ರೂಪಾಯಿ ಕೊಡು ಕೊಟ್ಟು ಸಾಗಹಾಕ್ತೀನಿ ಅವನ್ನ.
ಏನಂತ ಕೂಗಿಕೊಳ್ತಿದ್ದಾನೆ?
ಐಸ್ ಕ್ಯಾಂಡಿ ಅಂತ ಅವಾಗಿಂದ ಬಡಕೋತಿದ್ದಾನೆ.

***

ವಿವಾಹಿತರಿಬ್ಬರು
ನಾನು ಮಿತಭಾಷಿ
ನಾನೂ ಅಷ್ಟೇ, ನನಗೂ ಮದುವೆಯಾಗಿದೆ.

***

ಅಪ್ಪ ನಾನು ಎಸ್.ಎಸ್.ಎಲ್.ಸಿಯಲ್ಲಿ ಫಸ್ಟ್ ಕ್ಲಾಸ್ ಪಾಸಾದರೆ ಏನು ತೆಗೆದುಕೊಡ್ತೀಯಾ?
ಸೈಕಲ್
ಥ್ಯಾಂಕ್ಸ್, ಅಕಸ್ಮಾತ್ತಾಗಿ ಫೈಲಾದ್ರೆ?
ಸೈಕಲ್ ರಿಕ್ಷಾ

***

ಗಂಡ ಈ ಪ್ರಪಂಚದಲ್ಲಿ ನಾನು ಒಬ್ಬಳೇ ಮಹಿಳೆ ಯನ್ನು ಪ್ರೀತಿಸುವುದು ಎಂದು ಎಷ್ಟು ಸಾರಿ ನಿನಗೆ ಹೇಳಬೇಕು.
ಹೆಂಡತಿ. ಹೌದು ಇದನ್ನು ಬಹಳಷ್ಟು ಬಾರಿ ನೀವು ಹೇಳಿದ್ದೀರಿ ಆದರೆ ಆ ಮಹಿಳೆ ಯಾರೆಂದು ಇದುವರೆಗೂ ಹೇಳಲ್ಲಿಲ್ಲವಲ್ಲ

–ಬಿ.ಆರ್. ಉಷಾ, ಬೆಂಗಳೂರು

